**SINDHI HIGH SCHOOL,BENGALURU**
**HALF YEARLY EXAMINATION(2024-25)**
**SUBJECT – L2 KANNADA**

| | |
|---|---|
| **Date :27/09/2024** | **MARKS:80** |
| **Class: IX** | **Reading Time : 8:10 to 8:25 am** |
| **Number of printed sides : 8** | **Writing Time : 8:25 to 11:25 am** |

ಸೂಚನೆಗಳು:

- ಈ ಪ್ರಶ್ನೆ ಪತ್ರಿಕೆಯು A,B ಎಂಬ ಭಾಗಗಳನ್ನು ಮತ್ತು A B C D ಎಂಬ ನಾಲ್ಕು ವಿಭಾಗಗಳನ್ನು ಒಳಗೊಂಡಿರುತ್ತದೆ.

  ಒಟ್ಟು 15 ಮುಖ್ಯ ಪ್ರಶ್ನೆಗಳಿರುತ್ತವೆ.
- ಭಾಗ-A, ವಾಚನ ಮತ್ತು ಗ್ರಹಿಕಾ ಕೌಶಲ್ಯ.
- ಅಪಠಿತ ಗದ್ಯಭಾಗ ಪ್ರಶ್ನೆ ಸಂಖ್ಯೆ 1ಮತ್ತು 2
- ಪಠಿತ ಗದ್ಯಭಾಗ ಪ್ರಶ್ನೆ ಸಂಖ್ಯೆ 3 ಮತ್ತು 4
- ವಿಭಾಗ-ಬಿ, ಬಹು ಆಯ್ಕೆಯ ಪ್ರಶ್ನೆಗಳು(ಅನ್ವಯಿಕ ವ್ಯಾಕರಣ ಮತ್ತು ಪಠ್ಯಪೂರಕ ಅಧ್ಯಯನ) ಪ್ರಶ್ನೆಸಂಖ್ಯೆ 5 ರಿಂದ 7
- ವಿಭಾಗ- ಸಿ, ಬರವಣಿಗೆ ಕೌಶಲ್ಯ (ಪತ್ರ, ವರದಿ ಮತ್ತು ಪ್ರಬಂಧ) ಪ್ರಶ್ನೆ ಸಂಖ್ಯೆ 8 ರಿಂದ 10
- ವಿಭಾಗ-ಡಿ, ಪಠ್ಯಗಳ ಅಧ್ಯಯನ ಪ್ರಶ್ನೆ ಸಂಖ್ಯೆ 11 ರಿಂದ 15
- ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ನೀಡಿರುವ ಸೂಚನೆಗಳನ್ನು ಗಮನಿಸಿ.
- ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಉತ್ತರ ಪತ್ರಿಕೆಯಲ್ಲಿ ಸರಿಯಾದ ಪ್ರಶ್ನೆಸಂಖ್ಯೆಯನ್ನು ಬರೆಯಿರಿ.

| | | |
|---|---|---|
| ಭಾಗ-A (40 ಅಂಕಗಳು) | ವಾಚನ ಮತ್ತು ಗ್ರಹಿಕಾ ಕೌಶಲ್ಯ | 20 ಅಂಕಗಳು |
| | ಅನ್ವಯಿಕ ವ್ಯಾಕರಣ | 15 ಅಂಕಗಳು |
| | ಬಹು ಆಯ್ಕೆ ಪ್ರಶ್ನೆ- ಪಠ್ಯಪೂರಕ ಅಧ್ಯಯನ | 05 ಅಂಕಗಳು |
| ಭಾಗ–B ( 40 ಅಂಕಗಳು) | ಬರವಣಿಗೆ ಕೌಶಲ್ಯ | 12 ಅಂಕಗಳು |
| | ಪಠ್ಯಗಳ ಅಧ್ಯಯನ | 28 ಅಂಕಗಳು |
| | ಒಟ್ಟು ಅಂಕಗಳು | 80 ಅಂಕಗಳು |

**PART – A ( 40 ಅಂಕಗಳು )**

**SECTION – A**

**( ವಾಚನ ಮತ್ತು ಗ್ರಹಿಕಾ ಕೌಶಲ್ಯ ) = 20 ಅಂಕಗಳು**

I.ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 5X1=5

ನಮ್ಮ ಸುತ್ತ ಮುತ್ತ ಇರುವ ಬೆಟ್ಟ-ಗುಡ್ಡಗಳು, ಮರ-ಗಿಡಗಳು, ನಾವಿರುವ ಭೂಮಿ, ಸಾಗರ, ಸರೋವರಗಳು, ಹಳ್ಳ-ಕೊಳ್ಳಗಳು, ಪಶು-ಪಕ್ಷಿಗಳು, ಅರಣ್ಯ, ಗಾಳಿ, ಆಕಾಶ ಇವೆಲ್ಲವೂ ಸೇರಿ ಪರಿಸರವೆನಿಸಿದೆ. ಈ ಪರಿಸರವನ್ನೇ 'ಪ್ರಕೃತಿ' ಅಥವಾ'ನಿಸರ್ಗ'ವೆಂದು ಕರೆಯುತ್ತಾರೆ. ಪರಿಸರವನ್ನು ಮುಖ್ಯವಾಗಿ 'ಪ್ರಾಕೃತಿಕ ಪರಿಸರ' ಮತ್ತು 'ಮಾನವ ನಿರ್ಮಿತ ಪರಿಸರ'ವೆಂದು ವಿಭಾಗಿಸುತ್ತೇವೆ. ನದಿ, ಸಮುದ್ರ, ಅರಣ್ಯ, ಬೆಟ್ಟ-ಗುಡ್ಡ, ಪರ್ವತ ಮುಂತಾದವುಗಳು ಪ್ರಾಕೃತಿಕ ಪರಿಸರವಾದರೆ, ಕಟ್ಟಡಗಳು, ಕೃಷಿ ಭೂಮಿ, ಕೈಗಾರಿಕೆಗಳು, ನಗರಗಳು, ಅಣೆಕಟ್ಟುಗಳು, ಕಾಲುವೆ, ರಸ್ತೆ

ಇತ್ಯಾದಿಗಳು ಮಾನವ ನಿರ್ಮಿತ ಪರಿಸರವಾಗಿದೆ. ಪರಿಸರವನ್ನು ಬಿಟ್ಟು ಮನುಷ್ಯ ಜೀವನ ಸಾಧ್ಯವೇ ಇಲ್ಲ. ಆದರೆ ಇಂದು ಮನುಷ್ಯ ತನ್ನ ಸ್ವಾರ್ಥ ಸುಖಕ್ಕಾಗಿ ಪರಿಸರವನ್ನು ದುರ್ಬಳಕೆ ಮಾಡುತ್ತಿದ್ದಾನೆ. ಪರಿಸರವನ್ನು ಹಾಳು ಮಾಡುತ್ತಿದ್ದಾನೆ. ಇದರಿಂದಾಗಿ ಅತಿವೃಷ್ಟಿ, ಅನಾವೃಷ್ಟಿ, ಹವಾಮಾನದ ಏರು ಪೇರುಗಳು ಸಂಭವಿಸಿ, ಸುನಾಮಿ, ಪ್ರವಾಹ, ಚಂಡಮಾರುತ, ಭೂಕಂಪ ಮೊದಲಾದ ಪ್ರಕೃತಿ ವಿಕೋಪಗಳು ಉಂಟಾಗುತ್ತಿವೆ.

ಇತ್ತೀಚಿನ ದಿನಗಳಲ್ಲಿ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಅತಿವೃಷ್ಟಿ ಉಂಟಾಗಿ ಎಂದೂ ಬೀಳದಷ್ಟು ಮಳೆ ಸುರಿಯಿತು. ಊರುಗಳು ಜಲಪ್ರಳಯದಲ್ಲಿ ಮುಳುಗಿದವು. ಸಾವಿರಾರು ಮನೆಗಳು ಉರುಳಿದವು. ಜನ ಹಾಗೂ ಜಾನುವಾರುಗಳು ಪ್ರಾಣ ಕಳೆದುಕೊಂಡವು. ಲಕ್ಷಾಂತರ ಬೆಲೆಯ ಬೆಳೆ ಹಾಳಾಯಿತು. ಬಹುತೇಕ ಜನರಿಗೆ ನಿಲ್ಲಲು ನೆಲೆಯಿಲ್ಲದೆ, ತಿನ್ನಲು ಆಹಾರವಿಲ್ಲದ ಗತಿ ಬಂತು. ಸರಕಾರವು ಹೆಲಿಕಾಪ್ಟರ್ ಗಳ ಮೂಲಕ ಜನರಿಗೆ ಆಹಾರದ ಪೊಟ್ಟಣಗಳನ್ನು ವಿತರಿಸಿ, ದೋಣಿ, ತೆಪ್ಪಗಳ ಮೂಲಕ ಸುರಕ್ಷಿತ ಸ್ಥಳಗಳಿಗೆ ಜನರನ್ನು, ಜಾನುವಾರುಗಳನ್ನು ಸ್ಥಳಾಂತರಿಸಿತು. ವಾಡಿಕೆಯಂತೆ ಬರಬೇಕಾದಷ್ಟು ಮಳೆ ಬಾರದಿರುವುದನ್ನು 'ಅನಾವೃಷ್ಟಿ' ಅಥವಾ 'ಬರ'ಎನ್ನುತ್ತಾರೆ. ಆಗ ಬೆಳೆ ಇರುವುದಿಲ್ಲ. ಕುಡಿಯಲು ನೀರು ದೊರಕುವುದಿಲ್ಲ. ಜನರಿಗೆ ಜಾನುವಾರುಗಳಿಗೆ ಆಹಾರ ಮತ್ತು ನೀರಿನ ಅಭಾವ ಉಂಟಾಗುತ್ತದೆ. ಇದಕ್ಕೆ ವಿರುದ್ಧವಾಗಿ ವಾಡಿಕೆಗಿಂತಲು ಅಧಿಕಪಟ್ಟು ಮಳೆ ಬೇಡವಾದ ಸಮಯದಲ್ಲಿ ಸುರಿಯುವ ಸ್ಥಿತಿಯೇ ಅತಿವೃಷ್ಟಿ. ಅತಿವೃಷ್ಟಿಯಿಂದಲೂ ರೈತರಿಗೆ ಕಟಾವಿಗೆ ಬಂದ ಬೆಳೆ ಕೈಗೆ ಸಿಗದೆ ನಷ್ಟವಾಗುತ್ತಿದೆ. ಪ್ರಕೃತಿ ವಿಕೋಪಗಳು ಸಂಭವಿಸಲು ಮನುಷ್ಯನೇ ಕಾರಣನಾಗಿದ್ದು ಪ್ರಕೃತಿ ರಕ್ಷಣೆಯಲ್ಲಿ ತೊಡಗಿದರೆ ಮಾತ್ರ ಈ ವಿಕೋಪಗಳನ್ನು ದೂರವಿಡಲು ಸಾಧ್ಯ.

ಪ್ರಶ್ನೆಗಳು:

**1.** ಪರಿಸರವನ್ನು ಈ ರೀತಿ ವಿಭಾಗಿಸಲಾಗಿದೆ.

**(A)** ಸಾಮಾಜಿಕ ಮತ್ತು ಧಾರ್ಮಿಕ **(B)** ಪ್ರಾಕೃತಿಕ ಮತ್ತು ಮಾನವ ನಿರ್ಮಿತ

**(C)** ಭೌಗೋಳಿಕ ಮತ್ತು ಚಾರಿತ್ರಿಕ **(D)** ಆರ್ಥಿಕ ಮತ್ತು ರಾಜಕೀಯ

**2.** ಪರಿಸರಕ್ಕೆಸಂಬಧಿಸಿದಂತೆ ಕೆಳಗಿನ ಯಾವ ಹೇಳಿಕೆ ತಪ್ಪಾಗಿದೆ.

೧.ಪರಿಸರವನ್ನು ಬಿಟ್ಟು ಮನುಷ್ಯನ ಜೀವನ ಸಾಧ್ಯ.

೨.ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಪರಿಸರವನ್ನು ಹಾಳು ಮಾಡುತ್ತಿದ್ದಾನೆ.

೩. ಮಾನವ ಪರಿಸರದ ರಕ್ಷಣೆಯಲ್ಲಿ ತೊಡಗಿದರೆ ಮಾತ್ರ ವಿಕೋಪಗಳನ್ನು ತಡೆಗಟ್ಟಬಹುದು.

**4.** ಪರಿಸರವನ್ನು ನಿಸರ್ಗ, ಪ್ರಕೃತಿ ಎಂಬ ಹೆಸರುಗಳಿಂದಲೂ ಕರೆಯುತ್ತಾರೆ.

**(A)** ಹೇಳಿಕೆ- ೧ **(B)** ಹೇಳಿಕೆ - ೨ **(C)**ಹೇಳಿಕೆ- ೩ **(D)** ಹೇಳಿಕೆ- ೪

**3.** ಇಲ್ಲಿ ಅತಿವೃಷ್ಟಿ ಎಂದರೆ ________

**(A)** ಬರ **(B)** ಸುನಾಮಿ **(C)** ಪ್ರವಾಹ **(D)** ಭೂಕಂಪ

**4.** ಈ ಕೆಳಗಿನ ಯಾವ ಹೇಳಿಕೆ ತಪ್ಪಾಗಿದೆ.

ಹೇಳಿಕೆ ೧ : ಇತ್ತೀಚಿನ ದಿನಗಳಲ್ಲಿ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ 'ಅನಾವೃಷ್ಟಿ' ಉಂಟಾಗಿ ಎಂದೂ ಬೀಳದಷ್ಟು - ಮಳೆ ಸುರಿಯಿತು.

ಹೇಳಿಕೆ ೨ : ವಾಡಿಕೆಗಿಂತಲು ಅಧಿಕಪಟ್ಟು ಮಳೆ ಬೇಡವಾದ ಸಮಯದಲ್ಲಿ ಸುರಿಯುವ ಸ್ಥಿತಿಯೇ ಅತಿವೃಷ್ಟಿ

(A) ಹೇಳಿಕೆ ೧ ಸರಿ (B) ಹೇಳಿಕೆ ೨ ಮಾತ್ರ ಸರಿ

(C) ಹೇಳಿಕೆ ೧ ಮತ್ತು ೨ ಸರಿ (D) ಹೇಳಿಕೆ ೧ ತಪ್ಪು

5. ಪ್ರಕೃತಿ ವಿಕೋಪ ಸಂಭವಿಸಲು ಇವರು ಕಾರಣ.

(A) ಪ್ರಾಣಿಗಳು (B) ಮನುಷ್ಯರು (C) ಪಕ್ಷಿಗಳು (D) ಜಲಚರಗಳು

**II. ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 5X1=5**

ಉತ್ತರ ಕರ್ನಾಟಕದ ಬಳ್ಳಾರಿ ಜಿಲ್ಲೆಯಲ್ಲಿರುವ 'ಹಂಪಿ'ಯು ಯುನೆಸ್ಕೋದಿಂದ ವಿಶ್ವ ಪಾರಂಪರಿಕ ತಾಣದ ಮಾನ್ಯತೆ ಪಡೆದಿದೆ. ಕರ್ನಾಟಕದ ವಿಜಯನಗರ ಸಾಮ್ರಾಜ್ಯದ ವೈಭವ ಮತ್ತು ವಾಸ್ತುಶಿಲ್ಪ ಕಲೆಯನ್ನು ಸಾರುವ ಹೆಮ್ಮೆಯ ಪಟ್ಟಣವಾಗಿದೆ. ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ಇಲ್ಲಿನ ರಸ್ತೆಯ ಬೀದಿಗಳಲ್ಲಿ ಮುತ್ತು-ರತ್ನಗಳನ್ನು ರಾಶಿರಾಶಿ ಹಾಕಿ ಮಾರಲಾಗುತ್ತಿತ್ತು ಅಂದರೇ ನೀವೆ ಊಹಿಸಬಹುದು ಈ ನಗರದ ಶ್ರೀಮಂತಿಕೆ ಹೇಗಿತ್ತೆಂದು.

ಆ ಕಾಲವನ್ನು 'ವಿಜಯನಗರದ ಸ್ವರ್ಣಯುಗ' ಎಂದು ಹೇಳಲಾಗುತ್ತದೆ. ಇಂತಹ ಸಂಪದ್ಭರಿತವಾದ ಪಟ್ಟಣವು ಕರ್ನಾಟಕದಲ್ಲಿ ಇದ್ದಿದ್ದು ನಿಜವಾಗಿಯು ಕನ್ನಡಿಗರೆಲ್ಲರ ಹೆಮ್ಮೆಯ ಸಂಗತಿ. ವಿಜಯನಗರ ಸಾಮ್ರಾಜ್ಯವು ಒಂದು ಕಾಲದಲ್ಲಿ ಇಡೀ ದಕ್ಷಿಣ ಭಾರತಕ್ಕೇ ಧಾರ್ಮಿಕ ರಕ್ಷಣೆಯನ್ನು ಕೊಟ್ಟ ರಾಜ ಮನೆತನ. ಎಲ್ಲ ಕಲೆಗಳಂತೆ ವಾಸ್ತುಶಿಲ್ಪ ಕಲೆಯು ಈ ಕಾಲದಲ್ಲಿ ಪ್ರಾಮುಖ್ಯತೆಯನ್ನು ಪಡೆಯಿತು. ವಿಜಯನಗರದ ಕಾಲದ ದೇವಾಲಯಗಳಲ್ಲಿ ಕಾಣುವುದು ದ್ರಾವಿಡ ಶೈಲಿಯ ಮುಂದುವರೆದ ರೂಪ. ವಿಜಯನಗರದ ಪೂರ್ವಕಾಲದಲ್ಲಿಯೂ ದೇವಾಲಯಗಳಲ್ಲಿ ಅನ್ನದಾನ-ದಾಸೋಹಗಳು ನಡೆಯುತ್ತಿದ್ದವು. ಇದಲ್ಲದೆ ದೇವರಿಗೆ ನಿತ್ಯ ನೈವೇದ್ಯಕ್ಕಾಗಿ ವಿವಿಧ ಅಡುಗೆಗಳೂ ತಯಾರಾಗುತ್ತಿದ್ದವು. ಹೀಗೆ ಅಡುಗೆಯ ತಯಾರಿಕೆಗೆ ದೇವಾಲಯದ ಆವರಣದಲ್ಲೇ ಅಡುಗೆ ಮನೆ ಅಥವಾ ಪಾಕಶಾಲೆಗಳು ಆಗ ಇದ್ದಂತೆ ಕಂಡು ಬರುವುದಿಲ್ಲ. ಆದರೆ ವಿಜಯನಗರದ ಕಾಲದ ಆಲಯದ ಪ್ರಾಕಾರದಲ್ಲೇ ಆಗ್ನೇಯ ಮೂಲೆಯಲ್ಲಿ ಅಡುಗೆ ಮನೆಯನ್ನು ನಿರ್ಮಿಸುವ ಪದ್ಧತಿಯು ಆರಂಭವಾಯಿತೆನ್ನಬಹುದು. ನೈವೇದ್ಯ ಹಾಗೂ ಅನ್ನದಾನಗಳಿಗೆ ಅಲ್ಲೇ ಅಡಿಗೆಯು ತಯಾರಾಗುತ್ತಿತ್ತು. ಇಂದಿಗೂ ಅನೇಕ ದೇವಾಲಯಗಳಲ್ಲಿ ವಿಜಯನಗರದ ಕಾಲದ ಪಾಕಶಾಲೆಗಳನ್ನು ಕಾಣಬಹುದು.

ವಿಷ್ಣು ದೇವಾಲಯಗಳಲ್ಲಿ ಗರುಡಗಂಬವೂ, ಶಿವನ ಆಲಯಗಳಲ್ಲಿ ನಂದಿ ಧ್ವಜ ಸ್ತಂಭವೂ ನಿರ್ಮಾಣವಾಯಿತು. ಈ ಸ್ತಂಭದ ಪೀಠದಲ್ಲಿ ಗರುಡ,ನಂದಿ ಅಥವಾ ಸಂಬಂಧಪಟ್ಟ ದೇವರ ವಾಹನದ ಚಿಕ್ಕಚಿತ್ರವನ್ನು ಬಿಡಿಸಲಾಗಿರುತ್ತದೆ. ಕಲ್ಲಿನ ರಥವು ಮಧ್ಯಕರ್ನಾಟಕದ ಹಂಪಿಯಲ್ಲಿರುವ ವಿಜಯ ವಿಠಲ ದೇವಾಲಯದ ಮುಂಭಾಗದಲ್ಲಿರುವ ಒಂದು ಸ್ಮಾರಕವಾಗಿದೆ. ಕಲ್ಲಿನ ರಥವು ವಿಷ್ಣುವಿನ ಅಧಿಕೃತ ವಾಹನವಾದ ಗರುಡನಿಗೆ ಅರ್ಪಿತವಾದ ದೇವಾಲಯವಾಗಿದೆ.

ದ್ರಾವಿಡ ಶೈಲಿಯಲ್ಲಿ ನಿರ್ಮಿಸಲಾಗಿರುವ ರಥದಲ್ಲಿ ಪೌರಾಣಿಕ ಯುದ್ಧದ ದೃಶ್ಯಗಳನ್ನು ಚಿತ್ರಿಸುವ ಕೆತ್ತನೆಗಳಿವೆ. ಎರಡು ದೈತ್ಯ ಚಕ್ರಗಳ ಮೇಲೆ ನಿಂತು ಎರಡು ಆನೆಗಳು ರಥವನ್ನು ಎಳೆಯುವುದನ್ನು ಕಾಣಬಹುದು. ಕಲ್ಲಿನ ರಥವನ್ನು ಪರಿಪೂರ್ಣತೆಗೆ ಜೋಡಿಸಲಾಗಿದ ಅನೇಕ ಸಣ್ಣಕಲ್ಲುಗಳಿಂದ ಮಾಡಲಾಗಿದೆ. ಭಾರತದ ಕರೆನ್ಸಿಯಾದ ರೂಪಾಯಿಯ ೫೦ ರ ನೋಟುಗಳಲ್ಲಿ ಕಲ್ಲಿನ ರಥದ ಚಿತ್ರಗಳನ್ನು ಹೊಂದಿವೆ.

ಪ್ರಶ್ನೆಗಳು:

1. ಹಂಪಿ ಪಟ್ಟಣವನ್ನು 'ವಿಶ್ವಪಾರಂಪರಿಕ ತಾಣ'ವೆಂದು ಘೋಷಿಸಿದ ಸಂಸ್ಥೆ ___________

(A) ಐ.ಎಫ್.ಸಿ (B) ಯು.ಎನ್.ಒ (C) ಯುನೆಸ್ಕೊ (D) ಯುನಿಸೆಫ್

2. ವಿಜಯನಗರದ ದೇವಾಲಯಗಳು ಈ ಕೆಳಗಿನ ವಾಸ್ತುಶಿಲ್ಪ ಶೈಲಿಯನ್ನು ಹೊಂದಿದೆ.

(A) ವೇಸರ ಶೈಲಿ (B) ದ್ರಾವಿಡ ಶೈಲಿ (C) ಇಂಡೊ ಸಾರ್ಸೆನಿಕ್ (D) ಯಾವುದು ಅಲ್ಲ

3. ಈ ಕೆಳಗಿನ ಹೇಳಿಕೆಗಳನ್ನು ಸರಿಯಾಗಿ ಓದಿ ಉತ್ತರ ಬರೆಯಿರಿ.

ಹೇಳಿಕೆ-೧ ದ್ರಾವಿಡ ಶೈಲಿಯಲ್ಲಿ ನಿರ್ಮಿಸಲಾಗಿರುವ ರಥದಲ್ಲಿ ಪೌರಾಣಿಕ ಯುದ್ಧದ ದೃಶ್ಯಗಳನ್ನು ಚಿತ್ರಿಸುವ ಕೆತ್ತನೆಗಳಿವೆ

ಹೇಳಿಕೆ-೨ ಶಿವನ ಆಲಯಗಳಲ್ಲಿ ಗರುಡ ಧ್ವಜ ಸ್ತಂಭವೂ ನಿರ್ಮಾಣವಾಯಿತು

(A) ಹೇಳಿಕೆ ೧ ಮಾತ್ರ ಸರಿ (B) ಹೇಳಿಕೆ ೧ ಮತ್ತು ೨ ಸರಿ

(C) ಹೇಳಿಕೆ ೧ ಮತ್ತು ೨ ತಪ್ಪಾಗಿವೆ (D) ಹೇಳಿಕೆ ೨ ಮಾತ್ರ ಸರಿ.

4. ವಿಜಯನಗರದ ಕಾಲದ _____ಮೂಲೆಯಲ್ಲಿ ಅಡುಗೆ ಮನೆಯನ್ನು ನಿರ್ಮಿಸುವ ಪದ್ಧತಿಯು ಆರಂಭವಾಯಿತೆನ್ನಬಹುದು.

(A) ಈಶಾನ್ಯ (B) ವಾಯುವ್ಯ (C) ಆಗ್ನೇಯ (D) ನೈರುತ್ಯ

5. ಭಾರತದ ಕರೆನ್ಸಿಯಾದ ______ ನೋಟುಗಳಲ್ಲಿ ಕಲ್ಲಿನ ರಥದ ಚಿತ್ರಗಳನ್ನು ಹೊಂದಿವೆ.

(A) ೫ ರೂಪಾಯಿ (B) ೨೫ ರೂಪಾಯಿ (C) ೫೦೦ ರೂಪಾಯಿ (D) ೫೦ ರೂಪಾಯಿ

III. ಕೆಳಗೆ ಕೊಟ್ಟಿರುವ ಪಠ್ಯ ಪುಸ್ತಕ ಸಮಿತಿ ನಿಗದಿ ಪಡಿಸಿರುವ ಅವರು ಬರೆದ 'ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್' ಎಂಬ ಗದ್ಯವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. 5X1=5

ರಾಧಾಕೃಷ್ಣನ್ ಅವರ ಬಹುಮುಖ ಪ್ರತಿಭೆಯನ್ನು ಹತ್ತಿರದಿಂದ ಬಲ್ಲವರಾಗಿದ್ದ ನೆಹರು ಅವರು ಇವರನ್ನು ಮಾಸ್ಕೋದಲ್ಲಿ ಭಾರತದ ರಾಯಭಾರಿಯಾಗಿ ನೇಮಿಸಿದರು. ರಷ್ಯಾದ ಅಧ್ಯಕ್ಷರಾಗಿದ್ದ ಸ್ಟಾಲಿನ್ ಅವರ ಸ್ನೇಹ ಸೌಹಾರ್ದಗಳ ಭೇಟಿ ಫಲಪ್ರದವಾಗಿ ಉಭಯ ದೇಶಗಳ ಬಾಂಧವ್ಯ ವೃದ್ಧಿಸಿತು. ಇದರಿಂದ ಸಂತಸಗೊಂಡ ನೆಹರು ಅವರು ರಾಧಾಕೃಷ್ಣನ್ ಅವರನ್ನು ಮೆಚ್ಚಿ ಪ್ರಶಂಶಿಸಿದರು. ಅನಂತರ ಇವರನ್ನು ಭಾರತದ ಉಪರಾಷ್ಟ್ರಪತಿ ಸ್ಥಾನಕ್ಕೆ ನಾಮಕರಣ ಮಾಡಲಾಯಿತು. ಎರಡು ಬಾರಿ ಉಪರಾಷ್ಟ್ರಪತಿಗಳಾಗಿ ರಾಷ್ಟ್ರಕ್ಕೆ ಅನುಪಮ ಸೇವೆ ಸಲ್ಲಿಸಿದರು. ಈ ಅವಧಿಯಲ್ಲಿ ಹಲವಾರು ರಾಷ್ಟ್ರಗಳಿಗೆ ಭೇಟಿ ನೀಡಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಶಾಂತಿ ಸೌಹಾರ್ದವನ್ನು ಕಾಪಾಡುವಲ್ಲಿ ಯಶಸ್ವಿಯಾದರು. ಇವರ ಪ್ರವಾಸದ ಉದ್ದೇಶ ಭಾರತೀಯ ಜೀವನ, ಸಂಸ್ಕೃತಿ, ಚಿಂತನೆ ಮತ್ತು ಮಾನವ ಧರ್ಮವನ್ನು ಪ್ರಚಾರ ಮಾಡುವುದಾದ್ದರಿಂದ ವಿಶ್ವದ ಬುದ್ಧಿವಂತರ ಮೆಚ್ಚುಗೆ ಗಳಿಸಿದರು. ವಿಶ್ವದೆಲ್ಲೆಡೆಗಳಿಂದ ಶ್ಲಾಘಿಸಲ್ಪಟ್ಟ ಇವರನ್ನು ಪದವಿ ಹಾಗೂ ಹುದ್ದೆ ಅನಾಯಾಸವಾಗಿ ಹಂತ ಹಂತವಾಗಿ ಅರಸಿ ಬಂದವು. ಉಪರಾಷ್ಟ್ರ ಪತಿಯ ಸೇವೆಯನ್ನು ಯಶಸ್ವಿಯಾಗಿ ನಿರ್ವಹಿಸಿದ ಅನಂತರ ರಾಷ್ಟ್ರಪತಿ ಸ್ಥಾನಕ್ಕೆ ಸರ್ವಾನುಮತದಿಂದ ನಾಮಕರಣ ಮಾಡಲಾಯಿತು. ಅವರಿಗೆ ಬರುತ್ತಿದ್ದ ಹತ್ತು ಸಾವಿರ ರೂಪಾಯಿಗಳ ವೇತನದಲ್ಲಿ ಎರಡು ಸಾವಿರದ ಐನೂರು ರೂಪಾಯಿಗಳನ್ನು ಮಾತ್ರ ಪಡೆದು, ಉಳಿದ ಹಣವನ್ನು ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ ವಂತಿಗೆಯಾಗಿ ನೀಡುತ್ತಿದ್ದರು.

ಇವರ ಸ್ಮರಣೀಯ ಸೇವೆಯನ್ನು ಗುರುತಿಸಿ ಭಾರತ ಸರ್ಕಾರದ ಅತ್ಯುನ್ನತ ಪ್ರಶಸ್ತಿಯಾದ ' ಭಾರತರತ್ನವನ್ನು' ನೀಡಿ ಗೌರವಿಸಲಾಯಿತು. ಬ್ರಸೆಲ್ಸ್ ನ ಫ್ರಿ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿಯನ್ನು ಪ್ರದಾನ ಮಾಡಿತು. ಭಾರತೀಯ ವಿದ್ಯಾಭವನದ 'ಬ್ರಹ್ಮ ವಿದ್ಯಾಭಾಸ್ಕರ' ಬಿರುದಿಗೂ ಪಾತ್ರರಾದರು. ಹೀಗೆ ಇವರಿಗೆ ದೇಶ ವಿದೇಶಗಳ ಹಲವಾರು ಗೌರವ ಪದವಿಗಳು ದೊರಕಿದವು. ಭಾರತ ಸರ್ಕಾರ ಸೆಪ್ಟೆಂಬರ್ ೫ ರಂದು ಡಾ.ರಾಧಾಕೃಷ್ಣನ್ ಅವರ ಜನ್ಮ ದಿನವನ್ನು ೧೯೬೨ ರಿಂದ 'ರಾಷ್ಟ್ರೀಯ ಶಿಕ್ಷಕರ ದಿನ' ಎಂದು ಘೋಷಿಸಿ ಪ್ರತಿವರ್ಷವೂ ಆಚರಿಸಲು ನಿರ್ಧರಿಸಿತು.

ಪ್ರಶ್ನೆಗಳು:

1. ನೆಹರು ಅವರು ಮಾಸ್ಕೋದಲ್ಲಿ ಭಾರತದ ರಾಯಭಾರಿಯಾಗಿ ಯಾರನ್ನು ನೇಮಿಸಿದರು?

2. ಭಾರತ ಸರ್ಕಾರ ನೀಡುವ ಅತ್ಯುನ್ನತ ಪ್ರಶಸ್ತಿ ಯಾವುದು ?

3. 'ಭಾರತೀಯ ವಿದ್ಯಾಭವನ' ನೀಡುವ ಬಿರುದು ಯಾವುದು ?

4. ನೆಹರು ಕಾಲದಲ್ಲಿ'ರಷ್ಯಾ'ದ ಅಧ್ಯಕ್ಷರಾಗಿದ್ದವರು ಯಾರು ?

5.ರಾಧಾಕೃಷ್ಣನ್ ಅವರ ಜನ್ಮ ದಿನವನ್ನು ಭಾರತ ಸರ್ಕಾರ ಯಾವ ದಿನವೆಂದು ಘೋಷಿಸಲಾಗಿದೆ?

**IV.** ಈ ಕೆಳಗೆ ಕೊಟ್ಟಿರುವ ಕಯ್ಯಾರ ಕಿಯ್ಯಣ್ಣ ರೈ ಅವರು ಬರೆದ 'ಹೊಸಹಾಡು' ಎಂಬ ಪದ್ಯವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ. **5X1=5**

ನವಭಾವ-ನವಜೀವ-ನವಶಕ್ತಿ ತುಂಬಿಸುವ
ಹಾಡೊಮ್ಮೆ ಹಾಡಬೇಕು;
ತೀವ್ರತರ ಗಂಭೀರ ಭಾವನೆಯ ತೆರೆ ಮಸಗಿ
ವೀರಧ್ವನಿಯೇರಬೇಕು;

ಜಾತಿ-ಕುಲ-ಮತ-ಧರ್ಮ ಪಾಶಗಳ ಕಡಿದೊಗೆದು
ಎದೆ ಹಿಗ್ಗಿ ಹಾಡಬೇಕು;
ಯುಗಯುಗಗಳಾಚೆಯಲಿ ಲೋಕಲೋಕಾಂತದಲಿ
ಆ ಹಾಡು ಗುಡುಗಬೇಕು;

ಉನ್ನತೋನ್ನತ ಘನ ಹಿಮಾದ್ರಿ ಶಿಖರವನೇರಿ
ಹಾಡಲ್ಲಿ ಹಾಡಬೇಕು;
ಹಾಡು ನುಡಿಗುಂಡುಗಳು ಹಾರಿ ದಶದಿಕ್ಕಿನಲಿ
ಭಯದ ಬೆನ್ನಟ್ಟಬೇಕು;

ಗಂಡೆದೆಯ ಗರ್ಜನೆಗೆ ಮೂವತ್ತು ಮೂಕೋಟಿ
ಕಲಕಂಠ ಬೆರೆಸಬೇಕು;
ಭೂಮ್ಯಂತರಾಳದಲಿ ನಭಚಕ್ರಗೋಳದಲಿ
ಮಾರ್ದನಿಗಳೇಳಬೇಕು;

ಜಡನಿದ್ರೆ ಸಿಡಿದೆದ್ದ ವೀರಾಟ್ಟಹಾಸದಲಿ
ಬಾನು ಬುವಿ ಬೆಳಗಬೇಕು;
ನಡೆನುಡಿಗಳೆಡೆಯಲ್ಲಿ ಪದತಾಳ ಗತಿಯಲ್ಲಿ
ಕ್ರಾಂತಿ ಕಿಡಿ ಕೆರಳಬೇಕು;

ಪ್ರಶ್ನೆಗಳು:

1. ಕಡಿದೊಗೆಯಬೇಕಾದ ಪಾಶಗಳು ಯಾವುವು ?

2. ವೀರಧ್ವನಿ ಹೇಗೆ ಏರಬೇಕು ?

3. ಗಂಡೆದೆಯ ಗರ್ಜನೆಗೆ ಎಷ್ಟು ಕಲಕಂಠ ಬೆರೆಸಬೇಕು ?

4. ಎಲ್ಲಿ ಕ್ರಾಂತಿ ಕಿಡಿ ಕೆರಳಬೇಕು?

5. ಕವಿ ಎಂತಹ ಹಾಡನ್ನು ಹಾಡಬೇಕೆಂದು ಬಯಸಿದ್ದಾರೆ?

**SECTION –B**

**( ಅನ್ವಯಿಕ ವ್ಯಾಕರಣ ಮತ್ತು ಪಠ್ಯ ಪೂರಕ ಅಧ್ಯಯನ) = 20 ಅಂಕಗಳು**

**V. ಕೆಳಗಿನ ಪ್ರತಿಯೊಂದು ಬಹು ಆಯ್ಕೆ ಪ್ರಶ್ನೆಗಳಿಗೆ ನಾಲ್ಕು ಉತ್ತರವನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.** **10x1=10**

1. ಕೆಳಗೆ ಕೊಟ್ಟಿರುವ ಸಂಧಿ ಪದ - ಸಂಧಿಗಳನ್ನು ಹೊಂದಿಸಿ ಬರೆಯಿರಿ.

| | |
|---|---|
| a. ಕಂಬನಿ | ೧. ಸವರ್ಣ ದೀರ್ಘ ಸಂಧಿ |
| b. ದೇವಾಲಯ | ೨.ಆದೇಶ ಸಂಧಿ |
| c. ಹೊಯ್ಸಳೇಶ್ವರ | ೩. ಲೋಪ ಸಂಧಿ |
| d.ನಮ್ಮೂರು | ೪. ಗುಣ ಸಂಧಿ |
| | ೫. ಯಣ್ ಸಂಧಿ |

(A) ಎ-೨,ಬಿ-೧ , ಸಿ-೪, ಡಿ-೩ (B) ಎ-೫, ಬಿ-೧, ಸಿ-೨, ಡಿ-೩

(C) ಎ-೩, ಬಿ-೧ , ಸಿ-೪, ಡಿ-೫ (D) ಎ-೨, ಬಿ-೪ , ಸಿ-೫, ಡಿ-೩

2. ಕೆಳಗಿನ ಪದಗಳಲ್ಲಿ ತತ್ಪುರುಷ ಸಮಾಸದ ಸರಿಯಾದ ಆಯ್ಕೆಗಳನ್ನು ಗುರುತಿಸಿ ಬರೆಯಿರಿ.

1. ಬೆಟ್ಟದಾವರೆ – ಅರಮನೆ 2. ಕಾರ್ಮೋಡ - ಕೆಂದಾವರೆ

3. ಮಾಧವ – ಅವನೀಶ 4. ತಲೆನೋವು - ಕಣ್ಣುರುಡ

(A) 1 ಮತ್ತು 4 (B) 2 ಮತ್ತು 3 (C) 3 ಮತ್ತು 4 (D) 1 ಮತ್ತು 2

3. 'ರಾಜಧಾನಿಯಲ್ಲಿ' ಎಂಬ ಪದವು ಸಪ್ತಮೀ ವಿಭಕ್ತಿಯಾದರೆ 'ಹಳ್ಳಿಯ' ಎಂಬ ಪದವು ಈ ವಿಭಕ್ತಿಯಾಗಿದೆ.

(A) ಪ್ರಥಮಾ (B) ದ್ವಿತೀಯಾ (C) ಪಂಚಮೀ (D) ಷಷ್ಠೀ

4. ಮುರುಳಿಯು ಕುರುಡನಿಗೆ ದಾರಿ ತೋರಿದನು. ಈ ವಾಕ್ಯದಲ್ಲಿರುವ ಅನ್ವರ್ಥಕ ನಾಮಪದ ____________

(A) ಮುರುಳಿ (B) ಕುರುಡ (C) ದಾರಿ (D) ತೋರು

5 'ವೇಷಭೂಷಣ' ಪದವು ___________ ವ್ಯಾಕರಣಾಂಶವಾಗಿದೆ.

(A) ದ್ವಿರುಕ್ತಿ (B) ಜೋಡುನುಡಿ (C) ಅನುಕರಣಾವ್ಯಯ (D) ಕೃದಂತ

6. 'ಮೂಡಣ ದಿಕ್ಕಿನಲ್ಲಿರುವ ಹಳ್ಳಿಯಲ್ಲಿ ಹೊಲವಿದೆ'. ಈ ವಾಕ್ಯದಲ್ಲಿರುವ ದಿಗ್ವಾಚಕ ಪದ ಇದು _____

(A) ಹೊಲ (B) ಹಳ್ಳಿ (C) ದಿಕ್ಕು (D) ಮೂಡಣ

7. ಜಯ ಪದದ ವಿರುದ್ಧಾರ್ಥಕ ಪದ _________

(A) ಅಜಯ (B) ವಿಜಯ (C) ಅಪಜಯ (D) ಪರಾಜಯ

8. ಕೆಳಗೆ ಕೊಟ್ಟಿರುವ ತತ್ಸಮ-ತದ್ಭವಗಳ ಸರಿಯಾದ ರೂಪವನ್ನು ಗುರುತಿಸಿ ಬರೆಯಿರಿ.

(A) ಕಾವ್ಯ – ಕಬ್ಬ (B) ಬ್ರಹ್ಮ- ಬೊಮ್ಮ (C) ದೃಷ್ಟಿ – ತೃಷ್ಟಿ (D) ಯುಗ – ಬುಗ

(a) A ಮತ್ತು B (b) C ಮತ್ತು D (c) A ಮತ್ತು C (d) B ಮತ್ತು D

9.'ನಭ' ಈ ಪದದ ಸಮಾನಾರ್ಥಕ ಪದ ____________

(A) ಆಕಾಶ (B) ಭೂಮಿ (C) ಸೂರ್ಯ (D) ಚಂದ್ರ

10. ಅರ್ಜುನನು ಹಕ್ಕಿಯನ್ನು ಕಂಡು ಬಾಣ ಹೂಡಿದನು. ಗೆರೆ ಎಳೆದಿರುವ ಕ್ರಿಯಾಪದದ ಧಾತು _____

(A) ಹಕ್ಕಿಯನ್ನು (B) ಕಂಡು (C) ಹೂಡು (D) ಬಾಣ

VI. ಕೆಳಗಿನವುಗಳನ್ನು ಸೂಚನೆಯಂತೆ ಬರೆಯಿರಿ. 5X1=5

1. ರೈತನು ಹೊಲವನ್ನು ಬಿತ್ತಿದನು .( ಈ ವಾಕ್ಯವನ್ನು ಕರ್ಮಣಿ ಪ್ರಯೋಗದಲ್ಲಿ ಬಳಸಿ ಬರೆಯಿರಿ)

2. ರಾಧಾಳು ಓಟದ ಸ್ಪರ್ಧೆಯಲ್ಲಿ ಗೆದ್ದಳು. (ಈ ವಾಕ್ಯವನ್ನು ಭವಿಷ್ಯತ್ ಕಾಲದಲ್ಲಿ ಬರೆಯಿರಿ)

3. ರಾಜನು ದಾನ ಮಾಡಿದನು. (ಈ ವಾಕ್ಯವನ್ನು ನಿಷೇಧಾರ್ಥಕ ರೂಪದಲ್ಲಿ ಬರೆಯಿರಿ)

4. ಗಾದೆ ಮಾತಿನ ಅರ್ಥ ಬರೆಯಿರಿ.

'ದೇಶ ಸುತ್ತಿ ನೋಡು,ಕೋಶ ಓದಿ ನೋಡು' ಅಥವಾ ' ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೆ'

5.'ಮಂತ್ರ ಮುಗ್ಧ' ಪದವನ್ನು ಸ್ವಂತವಾಕ್ಯದಲ್ಲಿ ಬಳಸಿ ಬರೆಯಿರಿ.

VII. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 5x1=5

1.ನಾಕಾರು ಹಳ್ಳಿಯಲ್ಲಿ ವೇದಾಂತಿ ಎಂದು ಹೆಸರು ಮಾಡಿದ್ದವನು___________

(A) ತಿಪ್ಪಣ್ಣ (B) ಶಂಕ್ರಣ್ಣ C) ದುರ್ಗಪ್ಪ D) ಕಾಶೀಮಲಿ

2. ಗೀತೆಯನ್ನು ಹಾಡುತ್ತಾ ಪುಟ್ಟಹಕ್ಕಿ ________ ಸ್ವಾಗತಿಸುತ್ತದೆ.

(A) ಸೂರ್ಯನನು (B) ಚಂದ್ರನನ್ನು (C) ಮಕ್ಕಳನ್ನು (D) ಮರಿಗಳನ್ನು

3. ಭೂಮಿ ಆಕಾಶದಲ್ಲಿ ಪುಟ್ಟ ಹಕ್ಕಿಗೆ _________ ಭಯವಿದೆ

(A) ಭುಜಂಗ - ಗರುಡ (B) ಭುಜಂಗ - ಗೂಬೆ (C) ಹಾರುವ (D). ಭುಜಂಗ - ಗಿಡುಗ

4.ತಿಪ್ಪಣ್ಣನನ್ನು ಗಪ್ಪನೆ ಬಲವಾಗಿ ಹಿಡಿದುಕೊಂಡವರು__________________.

(A) ಶಂಕ್ರಣ್ಣ (B) ರಜಾಕಾರ್ರು (C) ಅಮೀನ್ ಸಾಬ್ರು (D) ಬೆಟ್ಟೂರು ಗೌಡ್ರು

5. ಅನ್ನವ್ವ ತಿಪ್ಪಣ್ಣನಿಗೆ ತಿನ್ನಲು ಚೀಲದಲ್ಲಿ____________ ಹಾಕಿ ಕೊಟ್ಟಳು

(A) ಅನ್ನ-ಸಾರು (B) ರೊಟ್ಟಿ-ಗಟ್ಟಿಬೇಳೆ (C) ಚಪಾತಿ-ಪಲ್ಯ (D) ರೊಟ್ಟಿ-ಚಟ್ನಿ

## ಭಾಗ – B (40 ಅಂಕಗಳು)

## SECTION-C

## (ಬರವಣಿಗೆ ಕೌಶಲ್ಯ) = 12 ಅಂಕಗಳು

VIII. ನಿಮ್ಮ ಬಡಾವಣೆಯಲ್ಲಿ ಉದ್ಯಾನವನವನ್ನು ಸ್ಥಾಪಿಸುವಂತೆ ಕೋರಿ ಆಯುಕ್ತರು ಬಿ.ಬಿ.ಎಂ.ಪಿ ಇವರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ. 1X4=4

ಅಥವಾ

ಕುವೆಂಪು ರಚನೆಯ'ಶ್ರೀ ರಾಮಾಯಣ ದರ್ಶನಂ' ಕೃತಿಯನ್ನು ಕಳುಹಿಸಿಕೊಡುವಂತೆ 'ಸ್ವಪ್ನ ಪುಸ್ತಕಾಲಯ' ಬೆಂಗಳೂರು ಇವರಿಗೆ ಮನವಿ ಪತ್ರ ಬರೆಯಿರಿ.

IX. ನಿಮ್ಮ ಶಾಲೆಯಲ್ಲಿ ನಡೆದ 'ಸ್ವಾತಂತ್ರ್ಯ ದಿನಾಚರಣೆಯ' ಕಾರ್ಯಕ್ರಮವನ್ನು ಕುರಿತು ಒಂದು ವರದಿಯನ್ನು ತಯಾರಿಸಿ. 1X4=4

X. ಈ ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1X4=4

1. ಜನಸಂಖ್ಯೆ 2. ನಿರುದ್ಯೋಗ ಸಮಸ್ಯೆ ನಿವಾರಣೆ 3. ಡಿಜಿಟಲ್ ಇಂಡಿಯಾ

## SECTION-D

(ಪದ್ಯಗಳ ಅಧ್ಯಯನ) = 28 ಅಂಕಗಳು

XI. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ. 4X2=8

1.ಮೀರಾಬಾಯಿ ದೇವಾಲಯದ ಸೌಂದರ್ಯವನ್ನು ವಿವರಿಸಿ.

2.ಗಾನರಾಣಿಯರು ಏನೆಂದು ಹರಿಶ್ಚಂದ್ರನನ್ನು ಕೀರ್ತಿಸಿ ಹಾಡಿದರು ?

3.ಪುಟ್ಟಹಕ್ಕಿ ಜಗದಂಗಳದಲ್ಲಿ ಹೇಗೆ ಹಾರುವುದು?

4.ದುರ್ಗಪ್ಪನು ಶಂಕ್ರಣ್ಣನಿಗೆ ಕುಲದ ಬಗೆಗೆ ಹೇಳಿದ ನೀತಿ ಮಾತುಗಳಾವುವು?

XII. ಈ ಕೆಳಗಿನ ಪ್ರಶ್ನೆಗಳಿಗೆ ಐದು – ಆರು ವಾಕ್ಯಗಳಲ್ಲಿ ಉತ್ತರಿಸಿ. 2X3=6

1. ತಲಕಾಡಿನ ಲೂಟಿಯ ವಿಚಾರದಲ್ಲಿ ವಿಷ್ಣುವರ್ಧನನ ನಿಲುವೇನು ?

2. ಪಾರಿವಾಳಗಳ ಆನಂದಕ್ಕೆ ಕಾರಣವೇನು ?

XIII. ಈ ಕೆಳಗಿನ ಪ್ರಶ್ನೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ. 2X3=6

1. "ಗಂಡಸರೂ ರಂಗುರಾಯರೇ "

ಅಥವಾ

" ಮಾನವತೆಯೇ ವಿಶ್ವ ಅನುಅಸರಿಸಬೇಕಾದ ಮಾರ್ಗ"

2. "ಜಡನಿದ್ರೆ ಸಿಡಿದೆದ್ದ ವೀರಾಟ್ಟಹಾಸದಲಿ ಬಾನು ಬುವಿ ಬೆಳಗಬೇಕು"

ಅಥವಾ

"ಬಡತನದ ಹೊತ್ತಾನೆ ದೊರಕಿ ಫಲವೇನು?"

XIV. ಈ ಕೆಳಗಿನ ಯಾವುದಾದರು ಒಂದು ಪ್ರಶ್ನೆಗೆ 8-10 ವಾಕ್ಯಗಳಲ್ಲಿ ಉತ್ತರಿಸಿ. 1X4=4

1. ಚೋಳ ದೊರೆ ಕುಲೋತ್ತುಂಗನು ಹೊಯ್ಸಳ ಸಾಮ್ರಾಜ್ಯದ ಮೇಲೆ ಯುದ್ಧ ಸಾರಲು ಇದ್ದ ಕಾರಣ ಮತ್ತು ಪರಿಣಾಮವನ್ನು ವಿವರಿಸಿ.

ಅಥವಾ

ಜಂತ್ರಮಂತ್ರದ ವಿಶೇಷತೆಯನ್ನು ಪರಿಚಯ ಮಾಡಿಕೊಡಿ.

XV. ಈ ಕೆಳಗಿನ ಯಾವುದಾದರು ಒಂದು ಪ್ರಶ್ನೆಗೆ 8-10 ವಾಕ್ಯಗಳಲ್ಲಿ ಉತ್ತರಿಸಿ. 1X4=4

1.ಹರಿಶ್ಚಂದ್ರನು ನೀಡಿದ ಬಹುಮಾನವನ್ನು ತಿರಸ್ಕರಿಸಿ ಗಾನರಾಣಿಯರು ಹೇಳಿದ ಮಾತುಗಳನ್ನು ತಿಳಿಸಿ?

ಅಥವಾ

ಜೋಡಿ ಪಾರಿವಾಳಗಳ ದುಡುಕಿನ ನಿರ್ಧಾರದ ಬಗ್ಗೆ ನಿಮ್ಮ ಅಭಿಪ್ರಾಯವೇನು?

************************************